ನಮ್ಮೊಡನೆ

# ಫಲಿಂತಾಂಶದ ಬಳಿಕ..

ಹೈಸ್ಕೂಲು ಶಿಕ್ಷಣದ ಕೊನೆಯ ಮೆಟ್ಟಿಲು ಹಾಗೂ ಕಾಲೇಜು ಶಿಕ್ಷಣದ ಮೊದಲ ಮೆಟ್ಟಿಲು ಎಂದೇ ಪರಿಗಣಿಸಲಾಗಿರುವ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಫಲಿತಾಂಶಗಳು ಪ್ರಕಟವಾಗಿವೆ. ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸ್ವಲ್ಪ ಇಳಿಮುಖವಾಗಿದೆ. ಪಿಯುಸಿ ಫಲಿತಾಂಶದಲ್ಲಿ ಸ್ವಲ್ಪ ಹೆಚ್ಚಳ ಆಗಿದೆ. ಫಲಿತಾಂಶ ಕುಸಿತ ಹಾಗೂ ಹೆಚ್ಚಳಕ್ಕೆ ಸಕಾರಣಗಳಿವೆ. ದುರದೃಷ್ಟದ ಸಂಗತಿ ಎಂದರೆ ಶೂನ್ಯ ಫಲಿತಾಂಶದ ಶಾಲಾ, ಕಾಲೇಜುಗಳು ಇಲ್ಲವೇ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣ ಮಾಡಲು ಸಾಧ್ಯವಾಗದಿರುವುದು. ನೂರಕ್ಕೆ ನೂರರಷ್ಟು ಫಲಿತಾಂಶ ಬಂದ ಶಾಲೆಗಳ ಸಾಧನೆ ಮೆಚ್ಚುವತಹದ್ದು. ಆದರೆ ಇಂಥ ಶಾಲೆಗಳಲ್ಲಿನ ಬೋಧನಾ ಕ್ರಮ ಹಾಗೂ ಪರೀಕ್ಷೆಗಳು ಹೇಗೆ ನಡೆದವು ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ. ನೂರಕ್ಕೆ ನೂರರಷ್ಟು ಫಲಿತಾಂಶ ಬರಲು ಬೋಧನಾ ಕ್ರಮ ಹಾಗೂ ಶಿಕ್ಷಕರ ಪರಿಶ್ರಮ ಕಾರಣ ಎಂದಾದರೆ ಅದು ಅನೇಕ ಶಾಲೆಗಳಿಗೆ ಮಾದರಿ ಆಗುತ್ತದೆ.

ಶೂನ್ಯ ಫಲಿತಾಂಶ ಬರಲು ಕಾರಣವೇನು ಎನ್ನುವುದನ್ನು ಪತ್ತೆ ಹಚ್ಚಿ ಸುಧಾರಣೆಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಮಾತುಗಳು ಪ್ರತಿ ವರ್ಷ ಫಲಿತಾಂಶ ಬಂದ ಸಂದರ್ಭದಲ್ಲಿ ಮಾತ್ರ ಕೇಳಿ ಬರುತ್ತವೆ. ಇಂತಹ  ಶಾಲಾ, ಕಾಲೇಜುಗಳಲ್ಲಿ ಪರಿಸ್ಥಿತಿ ಸುಧಾರಣೆಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಅದರಿಂದ ಫಲಿತಾಂಶದಲ್ಲಿ  ಸುಧಾರಣೆ ಆಯಿತೇ ಎನ್ನುವುದು ಸಾರ್ವಜನಿಕರ ಗಮನಕ್ಕೆ ಬರುತ್ತಿಲ್ಲ. ದುರದೃಷ್ಟದ ಸಂಗತಿ ಸುಧಾರಣೆಯ   ಕಾಳಜಿ ಮಾತುಗಳ ಮಟ್ಟದಲ್ಲೇ ಉಳಿದು ಬಿಡುತ್ತಿದೆ. ಶೂನ್ಯ ಫಲಿತಾಂಶಕ್ಕೆ ಶಾಲಾ, ಕಾಲೇಜುಗಳ ಮುಖ್ಯಸ್ಥರು ಹಾಗೂ ಶಿಕ್ಷಕರನ್ನು ಹೊಣೆಗಾರರನ್ನಾಗಿ ಮಾಡಬೇಕು. ಶಿಕ್ಷಕರು ಮನಸ್ಸು ಮಾಡಿದರೆ ಶೂನ್ಯ ಫಲಿತಾಂಶದ ಪರಿಸ್ಥಿತಿ ನಿರ್ಮಾಣವಾಗುವುದನ್ನು ತಡೆಯಬಹುದು.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಗಳು ಅವ್ಯವಹಾರಗಳಿಂದ ಮುಕ್ತವಾಗಿಲ್ಲ. ಅನೇಕ ಶಾಲಾ, ಕಾಲೇಜುಗಳ ಸಿಬ್ಬಂದಿಯೇ ಅವ್ಯವಹಾರಕ್ಕೆ ಅವಕಾಶ ಮಾಡಿಕೊಡುತ್ತಿರುವುದು ಹಲವಾರು ಸಲ ಬೆಳಕಿಗೆ ಬಂದಿದೆ.  ಸಾಮೂಹಿಕವಾಗಿ ಕಾಪಿ ಮಾಡಲು ಅವಕಾಶ ಕೊಟ್ಟು ಫಲಿತಾಂಶ ಹೆಚ್ಚಿಸಿಕೊಳ್ಳುವ ಶಾಲಾ, ಕಾಲೇಜುಗಳೂ ಇವೆ. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಬೋಧಕ ಸಿಬ್ಬಂದಿ, ಗ್ರಂಥಾಲಯ, ಕಟ್ಟಡ ಮತ್ತಿತರ ಮೂಲ ಸೌಲಭ್ಯಗಳ ಕೊರತೆ ಇದೆ. ಪಟ್ಟಣ ಪ್ರದೇಶಗಳ ಖಾಸಗಿ ಶಾಲಾ ಕಾಲೇಜುಗಳ ಶೈಕ್ಷಣಿಕ ಗುಣ ಮಟ್ಟ ಹಾಗೂ ಮೂಲಭೂತ ಸೌಕರ್ಯಗಳು ಉತ್ತಮವಾಗಿವೆ. ಈ ಎಲ್ಲ ಅಂಶಗಳೂ ಫಲಿತಾಂಶದ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದನ್ನು ಅಲ್ಲಗಳೆಯಲಾಗದು.

ಪಿಯುಸಿ ಫಲಿತಾಂಶದ ಕಾಲೇಜುವಾರು ಸಾಧನೆಯನ್ನು ಗಮನಿಸಿದರೆ ಅನುದಾನರಹಿತ ಕಾಲೇಜುಗಳ ಫಲಿತಾಂಶ (ಶೇ. 65.20) ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಫಲಿತಾಂಶಕ್ಕಿಂತ (ಶೇ. 56.36)ಉತ್ತಮವಾಗಿದೆ. ಅನುದಾನರಹಿತ ಕಾಲೇಜುಗಳ ಶಿಕ್ಷಕ ಸಿಬ್ಬಂದಿ ಪಡೆಯುವ ವೇತನ ಹಾಗೂ ಇತರ ಸೇವಾ ಸೌಲಭ್ಯಗಳಿಗೆ ಹೋಲಿಸಿದರೆ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಶಿಕ್ಷಕ ಸಿಬ್ಬಂದಿ ಪರಿಸ್ಥಿತಿ ಉತ್ತವಾಗಿದೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಸೌಲಭ್ಯ ಪಡೆಯುವ ಶಿಕ್ಷಕ ಸಿಬ್ಬಂದಿ ಇನ್ನೂ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡುವ ಅಗತ್ಯವಿದೆ ಎನ್ನುವುದನ್ನು ಫಲಿತಾಂಶಗಳು ಹೇಳುತ್ತವೆ.

ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶದ ಪ್ರಮಾಣ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿದೆ.  ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ (ಶೇ.79.92) ಮೊದಲ ಸ್ಥಾನದಲ್ಲಿರುವುದು ಅಚ್ಚರಿಯ ಬೆಳವಣಿಗೆ. ಫಲಿತಾಂಶ ಕುಸಿತಕ್ಕೆ ಪರೀಕ್ಷೆಗಳಲ್ಲಿ ಉತ್ತರ ಬರೆಯುವ ಪದ್ಧತಿಯಲ್ಲಿ ಆದ ಬದಲಾವಣೆಯೇ ಕಾರಣ ಎನ್ನಲಾಗಿದೆ. ಹಿಂದಿನ ವರ್ಷ ಶೇ.ಅರವತ್ತು ಅಂಕಗಳ ಪ್ರಶ್ನೆಗಳಿಗೆ ಮೂರ್ನಾಲ್ಕು ಉತ್ತರಗಳನ್ನು ನೀಡಿ ಸರಿಯಾದ ಉತ್ತರವನ್ನು ಗುರುತಿಸುವ ಪದ್ಧತಿ ಇತ್ತು. ಉಳಿದ 40 ಅಂಕಗಳ ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಬೇಕಿತ್ತು. ಈ ಕ್ರಮ ಅನುಸರಿಸಿದ್ದರಿಂದ ಫಲಿತಾಂಶ ಗಣನೀಯವಾಗಿ ಹೆಚ್ಚಿತು. ಆದರೆ ಹೀಗೆ ಉತ್ತೀರ್ಣರಾದ ವಿದ್ಯಾರ್ಥಿಗಳು ಮುಂದೆ ಪಿಯುಸಿ ಪರೀಕ್ಷೆಗಳಲ್ಲಿ ವಿವರಣಾತ್ಮಕ ಉತ್ತರ ಬರೆಯಲು ವಿಫಲರಾಗುತ್ತಿದ್ದರು ಎಂಬುದನ್ನು ಗಮನಿಸಿ ಪರೀಕ್ಷಾ ಮಂಡಳಿ ಈ ವರ್ಷದಿಂದ ಶೇ.25ರಷ್ಟು ಪ್ರಶ್ನೆಗಳಿಗೆ ಉತ್ತರಗಳನ್ನು ಗುರುತಿಸುವ ಮತ್ತು ಉಳಿದ 75 ಅಂಕಗಳ ಪ್ರಶ್ನೆಗಳಿಗೆ ಉತ್ತರ ಬರೆಯುವ ಹಳೆಯ ಪದ್ಧತಿಯನ್ನು ಜಾರಿಗೆ ತಂದಿತು. ಈ ಕ್ರಮದಿಂದ ಸದ್ಯಕ್ಕೆ ಫಲಿತಾಂಶ ಇಳಿಮುಖವಾಗಿದ್ದರೂ ಮುಂದೆ ಪಿಯುಸಿ ಫಲಿತಾಂಶದಲ್ಲಿ ಸುಧಾರಣೆ ಆಗಲಿದೆ ಎನ್ನುವ ಆಶಾಭಾವ ವ್ಯಕ್ತವಾಗಿದೆ.

■ ಪಿ.ಕೆ. ಹರಿಯಬ್ಬೆ

ಪಿಯುಸಿ ಫಲಿತಾಂಶದ ಕಾಲೇಜುವಾರು ಸಾಧನೆಯನ್ನು ಗಮನಿಸಿದರೆ ಅನುದಾನರಹಿತ ಕಾಲೇಜುಗಳ ಫಲಿತಾಂಶ (ಶೇ.65.20) ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಫಲಿತಾಂಶಕ್ಕಿಂತ (ಶೇ. 56.36) ಉತ್ತಮವಾಗಿದೆ. ಅನುದಾನರಹಿತ ಕಾಲೇಜುಗಳ ಶಿಕ್ಷಕ ಸಿಬ್ಬಂದಿ ಪಡೆಯುವ ವೇತನ ಹಾಗೂ ಇತರ ಸೇವಾ ಸೌಲಭ್ಯಗಳಿಗೆ ಹೋಲಿಸಿದರೆ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಶಿಕ್ಷಕ ಸಿಬ್ಬಂದಿ ಪರಿಸ್ಥಿತಿ ಉತ್ತವಾಗಿದೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಸೌಲಭ್ಯ ಪಡೆಯುವ ಶಿಕ್ಷಕ ಸಿಬ್ಬಂದಿ ಇನ್ನೂ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡುವ ಅಗತ್ಯವಿದೆ.



ಬಡಿಗೇರ